# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:16-09-2025ರಂದು ಮಂಗಳವಾರ ಪೂರ್ವಾಹ್ನ 10.00 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2025-26ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| **ಹಾಜರಾದ ಸದಸ್ಯರು :** | **ಪದನಾಮ** |
|---|---|
| 1. **ಪ್ರೊ. ಶರತ್ ಅನಂತಮೂರ್ತಿ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. **ಶ್ರೀಮತಿ ಉಮಾ. ಕೆ**<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಎನ್. ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಬಸವರಾಜ. ಎಸ್.**<br>ನಿರ್ದೇಶಕರು<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. **ಶ್ರೀ ಶಿವಕುಮಾರ**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 6. **ಶ್ರೀ ಎ. ಎಲ್. ಮಂಜುನಾಥ್.** ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್<br>ಕುಲಸಚಿವರು (ಆಡಳಿತ) | ಸದಸ್ಯರು |
| 7. **ಪ್ರೊ. ಆರ್. ತಿಮ್ಮರಾಯಪ್ಪ**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 8. **ಪ್ರೊ. ಹೆಚ್. ಎನ್. ರಮೇಶ**<br>ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| **ಗೈರು ಹಾಜರಾದ ಸದಸ್ಯರು** | |
| 1. **ಶ್ರೀ. ಡಿ. ಎಸ್. ಅರುಣ್.**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |

**ಪ್ರಸ್ತಾವನೆ:**

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯಕ್ಕೆ ನೂತನವಾಗಿ ನೇಮಕಕೊಂಡಿದ್ದ ಕುಲಸಚಿವರು(ಪರೀಕ್ಷಾಂಗ) ಇವರನ್ನು 2025-26ನೇ ಸಾಲಿನ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಗೆ ಪರಿಚಯಿಸಿ ನಂತರ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸದಸ್ಯರುಗಳನ್ನು ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯವು ನ್ಯಾಕ್ "A+" ಶ್ರೇಣಿಯನ್ನು ನಿರೀಕ್ಷಿಸಿದ್ದು ನ್ಯಾಕ್ "A"ಶ್ರೇಣಿ ಲಭ್ಯವಾಗಿರುವ ಸಂತಸದ ವಿಷಯವನ್ನು ಸಭೆಗೆ ಹಂಚಿಕೊಂಡರು. ಮುಂದುವರಿಯುತ್ತಾ ನ್ಯಾಕ್ "A"ಶ್ರೇಣಿ ಲಭ್ಯವಾಗಲು ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರ ಶ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ನ್ಯಾಕ್ "A+" ಶ್ರೇಣಿಯನ್ನು ಪಡೆಯಲು ಎಲ್ಲರ ಸಹಕಾರ ಅಗತ್ಯವೆಂದರು. ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು.

ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2025-ಹಸ:1:1** | ದಿನಾಂಕ:19-03-2025ರಂದು ನಡೆದ 2024-25ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ. |
| **ನಿರ್ಣಯ:** | ದಿನಾಂಕ:19-03-2025ರಂದು ನಡೆದ 2024-25ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| **2025-ಹಸ:1:2** | ದಿನಾಂಕ:19-03-2025ರಂದು ನಡೆದ 2024-25ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| **ನಿರ್ಣಯ:** | ದಿನಾಂಕ: 19-03-2025ರಂದು ನಡೆದ 2024-25ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| **2025-ಹಸ:1:3** | 2025-26ನೇ ಆರ್ಥಿಕ ವರ್ಷದ ಏಪ್ರಿಲ್-2025 ರಿಂದ ಜೂನ್-2025 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಕುರಿತು. |

| | |
|---|---|
| ಚರ್ಚೆ | 2025–26ನೇ ಆರ್ಥಿಕ ವರ್ಷದ ಏಪ್ರಿಲ್–2025 ರಿಂದ ಜೂನ್–2025 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ವಿವರಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅವಗಾಹನೆಗೆ ತಂದರು. ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಆರಂಭದ ಮತ್ತು ಅಂತಿಮ ಶಿಲ್ಕು ಅನ್ನು ನಮೂದಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲು ತಿಳಿಸಿದರು. ನಂತರ ಹಣಕಾಸು ಅಧಿಕಾರಿಗಳು ಮುಂದಿನ ಹಣಕಾಸು ಸಮಿತಿ ಸಭೆಗೆ ಏಪ್ರಿಲ್–2025ರಿಂದ ಸೆಪ್ಟೆಂಬರ್ –2025ರ ಸ್ವೀಕೃತಿ ಮತ್ತು ವೆಚ್ಚಗಳನ್ನು ಮಂಡಿಸುವ ಸಂದರ್ಭದಲ್ಲಿ ಆರಂಭದ ಶಿಲ್ಕು ಮತ್ತು ಅಂತಿಮ ಶಿಲ್ಕುಗಳನ್ನು ನಮೂದಿಸಿ ಮಂಡಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ನಿರ್ಣಯ | ಚರ್ಚೆಯ ನಂತರ 2025–26ನೇ ಆರ್ಥಿಕ ವರ್ಷದ ಏಪ್ರಿಲ್–2025ರಿಂದ ಜೂನ್–2025ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಸಭೆಯು ಅನುಮೋದಿಸಿತು. |
| **2025–ಹಸ:1:4** | STATUTES RELATING TO QUALIFICATION AND METHODS OF RECRUITMENT AND PROMOTION FROM THE POST OF LIBRARY ASSISTANTS TO ASSISTANT LIBRARIANS IN KUVEMPU UNIVERSITY AND ITS CONSTITUENT COLLEGES-2025ರ ಅನುಮೋದನೆ ಕುರಿತು. |
| ಚರ್ಚೆ | ಪರಿನಿಯಮವನ್ನು ಅನುಮೋದಿಸಲು ಮಾನ್ಯ ಕುಲಸಚಿವರು ಸಭೆಯನ್ನು ಕೋರಿದರು.<br><br>ಸಭೆಯಲ್ಲಿ ಹಾಜರಿದ್ದ ಆರ್ಥಿಕ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಮತ್ತು ಯೋಜನಾ ಇಲಾಖೆಗಳ ಪ್ರತಿನಿಧಿಗಳು ಮಾತನಾಡಿ. Library Assistant ಹುದ್ದೆಯು ದ್ವಿ.ದ.ಸ ಹುದ್ದೆಯ ವೇತನಶ್ರೇಣಿ ಹೊಂದಿರುವ ಹುದ್ದೆಯಾಗಿದ್ದು, ಆದರೆ, ಕರಡು ಪರಿನಿಯಮಗಳಲ್ಲಿ ಪ್ರ.ದ.ಸ ಹುದ್ದೆಯ ವೇತನ ಶ್ರೇಣಿಯನ್ನು ನಮೂದಿಸಲಾಗಿರುತ್ತದೆ. ಹಾಗೂ ವಿಶ್ವವಿದ್ಯಾಯಲದಲ್ಲಿನ Assistant Librarian ಹುದ್ದೆಯು ಯುಜಿಸಿ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯಾಗಿದ್ದು, ಆದರೆ, ಕರಡು ಪರಿನಿಯಮಗಳಲ್ಲಿ ರಾಜ್ಯ ವೇತನಶ್ರೇಣಿಯನ್ನು ನಮೂದಿಸಲಾಗಿರುತ್ತದೆ.<br><br>ಈ ಹಿನ್ನಲೆಯಲ್ಲಿ ಪ್ರಥಮದಲ್ಲಿ, ಕುವೆಂಪು ವಿಶ್ವವಿದ್ಯಾಲಯಕ್ಕೆ Library Assistant ಹುದ್ದೆಗಳು ಮಂಜೂರಾಗಿರುವ ಸರ್ಕಾರದ ಆದೇಶ, ಮಂಜೂರಾಗಿರುವ ಹುದ್ದೆಗಳ ಸಂಖ್ಯೆ: ಮೂಲತ: ಹುದ್ದೆಗೆ ನಿಗದಿಪಡಿಸಿರುವ ವೇತನ 'ಶ್ರೇಣಿಯ ಮಾಹಿತಿ ಹಾಗೂ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ Assistant Librarian ಹುದ್ದೆಗಳ ಸಂಖ್ಯೆ:, ವೇತನಶ್ರೇಣಿ ಹಾಗೂ ಒಂದು ವೇಳೆ ರಾಜ್ಯ ವೇತನ ಶ್ರೇಣಿಯಲ್ಲಿಯೂ ಈ ಹುದ್ದೆ ಮಂಜೂರಾಗಿದ್ದಲ್ಲಿ, ಈ ಕುರಿತ ಸರ್ಕಾರದ ಆದೇಶದ ಪ್ರತಿ; ಹಾಗೂ ವಿಶ್ವವಿದ್ಯಾಲಯದ ವೃಂದ ನೇಮಕಾತಿ ನಿಯಮಗಳಲ್ಲಿ ಈ ಬಗ್ಗೆ ಕಲ್ಪಿಸಿರುವ ಉಪಬಂಧಗಳ ಬಗ್ಗೆ ಕೋರಿದರು. |

| | |
|---|---|
| | ಮುಂದುವರೆದಂತೆ ವಿಶ್ವವಿದ್ಯಾಲಯಗಳಲ್ಲಿನ Assistant Librarian ಹುದ್ದೆಯು ಯುಜಿಸಿ ವೇತನಶ್ರೇಣಿಯ ಹುದ್ದೆಯಾಗಿದ್ದು, ಯುಜಿಸಿ ಮಾನದಂಡಗಳನ್ವಯ ಕೇವಲ ನೇರನೇಮಕಾತಿಗೆ ಮಾತ್ರ ಅವಕಾಶವಿದ್ದು, ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಿದರು. ಹಾಗೂ ಒಂದೇ ಪದನಾಮದಲ್ಲಿ ರಾಜ್ಯ ವೇತನಶ್ರೇಣಿ ಹಾಗೂ ಯುಜಿಸಿ ವೇತನ ಶ್ರೇಣಿಯಲ್ಲಿ ಎರಡು ಪ್ರತ್ಯೇಕ ಹುದ್ದೆಗಳನ್ನು ಸೃಜಿಸಲು ಅವಕಾಶವಿರುವುದಿಲ್ಲ. ಮುಂದುವರಿದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ40(3)ಪ್ರಕಾರ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಪರಿನಿಯಮಗಳು ಸರ್ಕಾರದ ನೀತಿ ನಿರ್ಣಯಗಳಿಗೆ ಪೂರಕವಾಗಿರತಕ್ಕದ್ದಾಗಿರುತ್ತದೆಂದು ತಿಳಿಸಿದರು.<br><br>ಮಾನ್ಯ ಕುಲಸಚಿವರು ಇತರೆ ವಿಶ್ವವಿದ್ಯಾಲಯಗಳು ಪರಿನಿಯಮಗಳಿಗೆ ಅನುಮೋದನೆಯನ್ನು ಪಡೆದುಕೊಂಡು ಬಡ್ತಿಯನ್ನು ನೀಡಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. |
| **ನಿರ್ಣಯ:** | ಸುದೀರ್ಘ ಚರ್ಚೆಯ ನಂತರ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರತಿನಿಧಿಗಳು ಮೇಲೆ ಕೋರಿರುವ ಎಲ್ಲಾ ಮಾಹಿತಿ/ ದಾಖಲೆಗಳೊಂದಿಗೆ ಇತರ ವಿಶ್ವವಿದ್ಯಾಲಯಗಳಲ್ಲಿ ಅವಕಾಶವಿದ್ದಲ್ಲಿ ಅದರ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಹಾಗೂ ತದನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆಯನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಬಹುದೆಂದು ನಿರ್ಣಯಿಸಲಾಯಿತು. |
| **2025-ಹಸ:1:5** | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.**<br>**-ಯಾವುದೂ ಇರುವುದಿಲ್ಲ -** |
| | ಅಂತಿಮವಾಗಿ ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಯವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು. |
| | (ಪ್ರೊ. ಹೆಚ್. ಎಸ್. ರಮೇಶ)<br>ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು<br><br>ಸಹಿ/-<br>(ಪ್ರೊ. ಶರತ್ ಅನಂತಮೂರ್ತಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು |

ಹಣಕಾಸು ಅಧಿಕಾರಿಗಳು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ.